# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ/ಕುವಿ/ಪವಿ/ 9231 2014-15

ರಿಜಿಸ್ಟ್ರಾರ್ ಮೌಲ್ಯಮಾಪನವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
ದಿನಾಂಕ: 26-12-2014

ಮರು ಮೌಲ್ಯಮಾಪನ / ಮರುಸಂಕಲನ / ಛಾಯಾಪ್ರತಿ (Photo Copy)ಕುರಿತು ವಿದ್ಯಾರ್ಥಿಗಳಿಗೆ ಸೂಚನೆಗಳು

1. ವಿದ್ಯಾರ್ಥಿಗಳು (Photo Copy) Xerox / Re-Totalling ಅರ್ಜಿಗಳನ್ನು ಫಲಿತಾಂಶ ಪ್ರಕಟವಾದ 08ದಿನಗಳೊಳಗೆ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಅರ್ಜಿಸಲ್ಲಿಸಬೇಕು ವಿಳಾಸ: www.kuvempu.ac.in (Examination → Results)
2. ವಿದ್ಯಾರ್ಥಿಗಳು Revaluation ಅರ್ಜಿಗಳನ್ನು ಫಲಿತಾಂಶ ಪ್ರಕಟವಾದ 12ದಿನಗಳೊಳಗೆ ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಅರ್ಜಿಸಲ್ಲಿಸಬೇಕು ವಿಳಾಸ: www.kuvempu.ac.in (Examination → Results)
3. ವಿದ್ಯಾರ್ಥಿ ಫಲಿತಾಂಶ ಪ್ರಕಟವಾದ ಆನ್‌ಲೈನ್‌ನಲ್ಲಿ 'Application for RV/RT/Xeroxಗೆ ಕ್ಲಿಕ್ ಮಾಡಿದಾಗ ವಿದ್ಯಾರ್ಥಿ ಸದರಿ ಸೆಮಿಸ್ಟರ್‌ನಲ್ಲಿ ತೆಗೆದುಕೊಂಡ ವಿಷಯಗಳ ಪಟ್ಟಿ ಬರುತ್ತದೆ. ಈ ಪಟ್ಟಿಯಲ್ಲಿ RV/RT/Xerox ಅರ್ಜಿ ಹಾಕುವ ವಿಷಯದ ಮುಂದೆ (✓)ಮಾರ್ಕ್ ಮಾಡಿದಾಗ ಸದರಿ ಕಾರ್ಯಕ್ಕೆ ಆಗುವ ಶುಲ್ಕದ ವಿವರದೊಂದಿಗೆ ಅಂಚೆ ಕಛೇರಿಯ ಚಲನ್‌ನ್ನು ಮುದ್ರಿಸಿಕೊಂಡು ನಿಗದಿಪಡಿಸಿದ ದಿನಾಂಕದೊಳಗೆ ಯಾವುದಾದರೂ ಅಂಚೆ ಕಛೇರಿಯಲ್ಲಿ ಶುಲ್ಕ ಭರಿಸಿ, ಚಲನ್ ಪ್ರತಿಯೊಂದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಚಲನ್ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯಮಾಡಲಾಗುವುದಿಲ್ಲ.

ಅ). ವಿದ್ಯಾರ್ಥಿಯು ಒಂದು ಪತ್ರಿಕೆಯ ಮೌಲ್ಯಮಾಪನ ಮತ್ತು ಮರುಸಂಕಲನ ಎರಡಕ್ಕೂ ಅರ್ಜಿ ಸಲ್ಲಿಸಿದ್ದು, ಮರು ಸಂಕಲನದಲ್ಲಿ ಹೆಚ್ಚು ಅಂಕಗಳು ದೊರೆತು ವಿದ್ಯಾರ್ಥಿಯು ಮರು ಮೌಲ್ಯಮಾಪನವನ್ನು ಇಚ್ಚಿಸದೇ ಇದ್ದಲ್ಲಿ, ಈ ಬಗ್ಗೆ ಲಿಖಿತವಾಗಿ ಮರು ಟಪಾಲಿನಲ್ಲಿ ಮರುಮೌಲ್ಯಮಾಪನ ಅರ್ಜಿ ಸಲ್ಲಿಸುವ ಕಡೆಯ ದಿನಾಂಕದೊಳಗಾಗಿ ಮನವಿ ಸಲ್ಲಿಸಿದ್ದಲ್ಲಿ ಮಾತ್ರ ಮರು ಮೌಲ್ಯಮಾಪನಕ್ಕೆಂದು ಪಾವತಿಸಿದ ಶುಲ್ಕವನ್ನು ನಿಯಮಾನುಸಾರ ಹಿಂದಿರುಗಿಸಲಾಗುವುದು.

ಆ). ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನೊಂದಣಿ ಸಂಖ್ಯೆ, ಪತ್ರಿಕೆಯ ಹೆಸರು, ಕೋಡ್ ಸಂಖ್ಯೆಗಳ ಸ್ಪಷ್ಟವಾಗಿ ಪರಿಶೀಲಿಸಿ ನಮೂದಿಸಬೇಕು. ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್‌ನಲ್ಲಿರುವ ವಿದ್ಯಾರ್ಥಿಗಳ ಸೂಚನೆಗಳನ್ನು ಗಮನಿಸುವುದು.

**"ಅರ್ಜಿ ಸಲ್ಲಿಸಿದ ಚಲನ್ ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು"**

## ಕಾಲೇಜುಗಳಿಗೆ ಸೂಚನೆಗಳು

ವಿದ್ಯಾರ್ಥಿಯು **ಮರು ಮೌಲ್ಯಮಾಪನ** / ಮರುಸಂಕಲನ / (Photo Copy) **ಛಾಯಾಪ್ರತಿಗಾಗಿ** ಪಾವತಿಸಿದ ಶುಲ್ಕದ ವಿವರ ಮತ್ತು ಉಳಿದ ದಾಖಲಾತಿ ಮತ್ತು ಕೊನೆ ದಿನಾಂಕದಿಂದ ಎರಡುದಿನದೊಳಗಾಗಿ ಅರ್ಜಿ ಸಲ್ಲಿಸಿದ ಮತ್ತು ಶುಲ್ಕದ ವಿವರಗಳನ್ನು ಪರಿಶೀಲಿಸಿ ಪ್ರಾಂಶುಪಾಲರ ಮೇಲುಸಹಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ನಂತರ ಕಳುಹಿಸುವ ಅರ್ಜಿಗಳನ್ನು ಮಾನ್ಯಮಾಡುವುದಿಲ್ಲ.

ಕುಲಸಚಿವರು(ಪರೀಕ್ಷಾಂಗ)

Letters